ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಓದಿ ಅಮೆರಿಕ ವಾಸಿ ಆಗಿರುವ ಪ್ರಕಾಶ್ ನಾಯಕ್ ಸಾಹಿತ್ಯ ಕ್ಷೇತ್ರದಲ್ಲಿ ಸಕ್ರಿಯರು. ಕಾದಂಬರಿ, ಕಥೆಗಳನ್ನು ಬರೆಯುತ್ತ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸುತ್ತ, ಸಾಹಿತ್ಯ ಪತ್ರಿಕೆಗಳ ಸಂಪಾದನೆಯ ಕೆಲಸದಲ್ಲಿ ತೊಡಗಿಕೊಳ್ಳುತ್ತ ಕನ್ನಡದ ಗುಂಗಿನಲ್ಲಿಯೇ ಇರಬಯಸುವವರು. 'ಅಮೂರ್ತ ಚಿತ್ತ' ಅವರ ಪ್ರಕಟಿತ ಕಥಾಸಂಕಲನ.'ಅಂತು' ಅವರು ಬರೆದ ಕಾದಂಬರಿ.

ಮುಂದೆ ಕೂತು ಅಲ್ಲಿನ ಏಕಮಾತ್ರ ಸರ್ವರ್ ಲೋಕಿ ಬರುವುದನ್ನು ಕಾಯುತ್ತ ಕುಳಿತ. ತಾನಿಲ್ಲಿ ಕುಳಿತದ್ದು ಯಾರ ಕಣ್ಣಿಗೂ ಬೀಳದಿರುವುದರಿಂದ ಲೋಕಿಯೂ ಬರಲಿಕ್ಕಿಲ್ಲವೇನೋ ಎನ್ನುವ ಸಂಶಯ ಬಂತು.

ನಂದನವನ ಬೆಳಗಿನ ಗ್ರಾಹಕರಿಂದ, ಅವರ ಮಾತುಗಳಿಂದ, ಅವರ ಮುಂದಿದ್ದ ತಿಂಡಿಗಳ ವಾಸನೆಯಿಂದ ತುಂಬತೊಡಗಿತ್ತು. ನಲವತ್ತು ವರ್ಷ ದಾಟಿದ ಲೋಕಿ ಎಂದಿನಂತೆಯೇ ದೊಡ್ಡ ದನಿಯಲ್ಲಿ ಆರ್ಡರ್ ಮಾಡಿದ ತಿಂಡಿಗಳನ್ನು ಕೂಗುತ್ತ, ಅಡುಗೆ ಕೋಣೆ ಮತ್ತು ಇದ್ದ ಹತ್ತು ಟೇಬಲ್ಲುಗಳ ನಡುವೆ ಹದಿಹರೆಯದ ಹುಡುಗರಂತೆ ಓಡಾಡತೊಡಗಿದ್ದ. ಅವನ ನಡುವೆ ಬೈತಲೆ ತೆಗೆದು ಎರಡೂ ಕಡೆ ಬಾಚಿದ್ದ ಕೂದಲು, ಯಾವಾಗಲೂ ಇದ್ದ ಕುಶಾಲು ನಗು, ಮಾಡುವ ತಮಾಷೆಗಳು, ಕಿವಿಗೆ ಸಿಕ್ಕಿಸಿದ ಪೆನ್ಸಿಲ್ಲು, ಹಾಕಿರುವ ಬಿಳಿಧೋತರ, ದೊಗಲೆ ಅಂಗಿಗಳು ಭರವಸೆಯನ್ನೂ, ಮನರಂಜನೆಯನ್ನೂ ಭರಪೂರ ಕೊಡುತ್ತಿದ್ದವು; ಮುಖ ಒಣಗಿಸಿಕೊಂಡು ಒಳಹೊಕ್ಕ ಗಿರಾಕಿಗಳನ್ನು ಹೋಟಲಿನ ಜಾಯಮಾನಕ್ಕೆ, ಆರಕ್ಕೇರದ ಮೂರಕ್ಕಿಳಿಯದ ತಿಂಡಿಗಳ ರುಚಿಗೆ ಒಗ್ಗಿಸಿಬಿಡುತ್ತಿದ್ದವು. ಆತ್ಮಾರಾಮನಿಗೂ ಅವನು ಬೇಕಾದವನೇ. ಲೋಕಿಗೆ ತಿಳಿಯದ ವಿಷಯವೇ ಇರಲಿಲ್ಲ; ಸಿನಿಮಾ, ಯಕ್ಷಗಾನ, ಕ್ರಿಕೆಟ್ಟುಗಳಂತಹ ಸಾಮಾನ್ಯ ವಿಷಯಗಳಿಂದ ಹಿಡಿದು ಸ್ಟಾಕ್ ಮಾರ್ಕೆಟ್ಟು, ಗ್ಲೋಬಲ್ ವಾರ್ಮಿಂಗ್ ಕುರಿತೂ ಏನಾದರೊಂದು ಟಿಪ್ಪಣಿ ಮಾಡಬಲ್ಲ ಮಹಾನುಭಾವ. ಇಷ್ಟೆಲ್ಲ ತಿಳಿದವನು ಇಲ್ಲಿ ಯಾಕೆ ಕೊಳೆಯುತ್ತಿದ್ದಾನೆ ಎನ್ನುವ ಸಂಶಯ ಬಂದರೂ ಶೆಟ್ಟರ ಆನೆಕಿವಿ ಆಲಿಸುತ್ತಿರಬಹುದೆನ್ನುವ ಭಯದಿಂದ ಆ ಪ್ರಶ್ನೆಯನ್ನು ಅವನಲ್ಲಿ ಕೇಳದೆ ಸುಮ್ಮನಾಗಿಬಿಡುತ್ತಿದ್ದ. ಕೆಲವೊಮ್ಮೆ ಅವನಿಲ್ಲದಾಗ ಇಡೀ ಹೋಟೆಲು ಬಣ್ಣ ಕಳೆದುಕೊಳ್ಳುತ್ತಿತ್ತು. ಕೆಲವು ದಿನಗಳವರೆಗೆ ಅವನ ಪತ್ತೆಯೇ ಇರುತ್ತಿರಲಿಲ್ಲ; ಅಪರೂಪಕ್ಕೆ ಒಮ್ಮೆ, ಅದೂ ಅವನ ಅನುಪಸ್ಥಿತಿಯಲ್ಲಿ ಅವನ ಹಿನ್ನೆಲೆ ಸರಿ ಇಲ್ಲ ಎನ್ನುವ ಆರೋಪಗಳನ್ನು ಕೇಳಿದ್ದ. ಹಾಗೆ ಆರೋಪಿಸಿದವರು ಅವನ ಕಣ್ಣಿನ ಕೆಳಗಿರುವ ಗೀರಿದ ಗಾಯದ ಅವಶೇಷವನ್ನು ಅದಕ್ಕೆ ಸಾಕ್ಷಿಯಾಗಿ ಕೊಡುತ್ತಿದ್ದರು. ಒಮ್ಮೆ ತಾವು ಆರ್ಡರ್ ಮಾಡಿದ್ದೇ ಬೇರೆ, ಲೋಕಿ ಕೊಟ್ಟಿದ್ದೇ ಬೇರೆ ಎಂದು ಕೆಂಡಾಮಂಡಲವಾಗಿದ್ದ ಗಿರಾಕಿಯೊಬ್ಬರು 'ಎಂತೆಂತವರನ್ನೆಲ್ಲಾ ಕೆಲಸಕ್ಕೆ ಸೇರಿಸಿಕೊಂಡರೆ ಆಗೋದೇ ಹೀಗೆ' ಎಂದು ಲೋಕಿಯನ್ನು ನೋಡುತ್ತಲೇ ಕೂಗಿದ್ದರು. ಶೆಟ್ಟರು, 'ಲೋಕಿ ನೀನು ಒಳಗೆ ಹೋಗೋ ಮಾರಾಯಾ, ಇಲ್ಲೇನು ಕೋತಿ ಕುಣಿತಿದ್ಯಾ?' ಎಂದು ಗದರಿ, ಗಿರಾಕಿಯನ್ನು ಸಂತೈಸಿದ್ದರು. ಆದರೂ ಆತ್ಮಾರಾಮನ ಪಾಲಿಗೆ ಲೋಕಿ ಹೋಟೆಲ್ಲಿನ ದೈನಂದಿನ ಸ್ಪೆಷಲ್; ಅದೇ ಕಾರಣಕ್ಕೆ ನಂದನವನದ ಬೆಳಗಿನ ಭೇಟಿಯನ್ನು ಎಂದಿಗೂ ತಪ್ಪಿಸುತ್ತಿರಲಿಲ್ಲ. ಇವತ್ತೂ ತನ್ನನ್ನು ಸುತ್ತಿಕೊಂಡಿರುವ ಈ ದರಿದ್ರಕ್ಕೆ ಅವನೇ ಏನಾದರೂ ಪರಿಹಾರ ಹೇಳಬಹುದು ಎನ್ನುವ ದೂರದ ಆಸೆಯೂ ಇತ್ತು.



ಒಳಗೊಳಗೇ ಕೊತಕೊತ ಕುದಿಯುತ್ತಿದ್ದ ಅಸಂಬದ್ಧತೆಯ ಬಿಸಿಗೆ ಆತ್ಮಾರಾಮನಿಗೆ ಸುಮ್ಮನೆ ಕುಳಿತುಕೊಳ್ಳಲಾಗಲಿಲ್ಲ. ಸುತ್ತ ಕೂತ ಗಿರಾಕಿಗಳನ್ನು ಒಬ್ಬೊಬ್ಬರಾಗಿ ಗಮನಿಸುತ್ತಾ, ಅವರನ್ನು ಅವರ ಉಡುಗೆ, ಆಕಾರ, ಆರ್ಡರ್ ಮಾಡಿರುವ ತಿಂಡಿಗಳು... ಇತ್ಯಾದಿ ಅಂಶಗಳ ಮೇಲಿಂದ